Suresh Angadi Education Foundation's

# Angadi International School

(Affiliated CBSE, New Delhi)

WORK SHEET

**Grade :VI** **Subject : Kannada**

## ಪ್ರಬಂಧ

## ಗ್ರಂಥಾಲಯಗಳ ಮಹತ್ವ

ಪೀಠಿಕೆ- ಗ್ರಂಥಾಲಯವೆಂದರೆ ಕೇವಲ ಗ್ರಂಥಗಳ ಮನೆಯಲ್ಲ, ಅದೊಂದು ಬೃಹತ್ ಗ್ರಂಥಗಳ ಮಹಾಮನೆ. ಹನ್ನೆರಡನೆಯ ಶತಮಾನದ ಪೂರ್ವದಿಂದ ಹಿಡಿದು ಇಪ್ಪತ್ತನೆಯ ಶತಮಾನದವರೆಗೂ ನಡೆದು ಬಂದ ಸಾಮಾಜಿಕ, ಆರ್ಥಿಕ ,ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ರಂಗಗಳ ಪರಿಚಯದ ಪ್ರತಿಬಿಂಬವನ್ನು ನಿರ್ಮಿಸುವ ಕೇಂದ್ರ, ಅದನ್ನು ಸಾಮಾನ್ಯವಾಗಿ ಗ್ರಂಥಾಲಯ ಎಂದು ಕರೆಯುತ್ತಾರೆ.

ವಿಷಯ ವಿಶ್ಲೇಷಣೆ - ಪ್ರತಿಯೊಂದು ಗ್ರಂಥಗಳನ್ನು ಸ್ವತಃ ಕೊಂಡು ಓದುವುದು ಸಾಧ್ಯವಿಲ್ಲ. ಕೆಲವೊಂದು ಗ್ರಂಥಗಳ ಬೆಲೆ ವಿಪರೀತ. ದೊರೆಯುವ ಪ್ರತಿಗಳು ಅತ್ಯಲ್ಪ, ಅಂಥವುಗಳಿಗಾಗಿ ಗ್ರಂಥಾಲಯಗಳಿಗೆ ಮೊರೆ ಹೋಗಬೇಕಾಗುವುದು. ಇಂದು ಸರಕಾರವು ಸಾರ್ವಜನಿಕವಾಗಿ ಗ್ರಂಥಾಲಯಗಳ ಸೌಲಭ್ಯವನ್ನು ಒದಗಿಸಿಕೊಟ್ಟಿದೆ.ವಾಚನಾಲಯಗಳು ಗ್ರಂಥಾಲಯಗಳ ಇನ್ನೊಂದು ಮುಖ. ಇಲ್ಲಿ ಕೇವಲ ದಿನಪತ್ರಿಕೆಗಳು, ವಾರಪತ್ರಿಕೆಗಳು, ಸುಧಾ, ಕರ್ಮವೀರ, ಪುಟಾಣಿ ಪ್ರಪಂಚ ಮತ್ತು ಕಾದಂಬರಿಯಂತಹ ಪುಟ್ಟ ಹೊತ್ತಿಗೆಗಳಿರುತ್ತವೆ. ಇದರಿಂದ ಜನಸಾಮಾನ್ಯರಿಗೆ ಪ್ರತಿನಿತ್ಯದ ಆಗುಹೋಗುಗಳ ಜ್ಞಾನ ಉಂಟಾಗುವುದು.ಎಲ್ಲರಿಗೂ ವರ್ತಮಾನದ ಸ್ಥಿತಿಗತಿಗಳು ದೊರಕುವಂತೆ ಗ್ರಂಥಾಲಯಗಳು ಅವಕಾಶ ಕಲ್ಪಿಸಿಕೊಡುತ್ತವೆ.

ಉಪಸಂಹಾರ -(**"They are the soul of a progressive nation"** ಎಂಬ ಉಕ್ತಿ ಗ್ರಂಥಾಲಯಗಳ ಮಾಹಿತಿಯನ್ನು ಸಾರಿ ಹೇಳುತ್ತಿವೆ.ನಮ್ಮ ರಾಷ್ಟ್ರಪಿತ ಉತ್ತೇಜಿತರಾದುದು ಶ್ರೇಷ್ಠ ಗ್ರಂಥಗಳಿಂದಲೇ ಎಂಬುದನ್ನು ಜ್ಞಾಪಿಸಿಕೊಳ್ಳುವುದು ಅವಶ್ಯಕ. ಅದಕ್ಕಾಗಿ ಇಂದಿನ ಸಮಾಜದ ಉಳಿವು- ಅಳಿವು ಗ್ರಂಥಾಲಯಗಳನ್ನು ಅವಲಂಬಿಸಿದೆ. ಅವುಗಳ ನಿರಂತರ ಉಳಿವಿಗಾಗಿ ಶ್ರಮಿಸಬೇಕು. ಆ ದೇವಾಲಯಗಳ ದರ್ಶನವನ್ನು ಮಾಡುವುದೇ ಒಂದು ಭಾಗ್ಯ, ಇದರಿಂದ ನಮಗೆ ಗ್ರಂಥಾಲಯದ ಮಹತ್ವ ತಿಳಿದು ಬರುತ್ತದೆ.